ಶ್ರೀ ಎ. ಲಕ್ಷ್ಮೀಸಾಗರ್.—(ಕಾನೂನು ಮತ್ತು ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಪಡುವಾರಹಳ್ಳಿಗೆ ಪೂರ್ವ ದಿಕ್ಕಿನಲ್ಲಿರುವ ಬಡಾವಣೆಯಲ್ಲಿ ೧೮೪ ವಾಸದ ಮನೆಗಳ ನಿವೇಶನಗಳನ್ನು ನಿರ್ಮಿಸಲಾಗಿದೆ.

ಆ) ಇಲ್ಲ

ಇ) ಇಲ್ಲ

ಈ) ಸಾರ್ವಜನಿಕರಿಂದ ತಕರಾರು ಬಂದಿದ್ದರಿಂದ, ೨೬-೭-೮೫ರಂದು ಮೈಸೂರು ನಗರಾಭಿವೃದ್ಧಿ ವಿಶೇಷ ಮಂಡಳಿಯ ಅಧ್ಯಕ್ಷರಿಗೆ ಸರ್ಕಾರವು ನಿರ್ದೇಶನ ನೀಡಿ ಪಡುವಾರಹಳ್ಳಿ ಬಡಾವಣೆಯಲ್ಲಿ ಯಾವ ನಿವೇಶನಗಳನ್ನು ಮಂಜೂರು ಮಾಡ ಕೂಡದೆಂದು ಹೇಳಿದೆ. ನಿವೇಶನಗಳನ್ನು ಹಂಚುವಾಗ ೯೦ ಭಾಗದಷ್ಟನ್ನು ಲಾಟರಿಯ ಮೂಲಕವೂ ಮತ್ತು ೧೦ ಭಾಗವನ್ನು ಮಂಡಳಿಯ ತೀರ್ಮಾನದಂತೆ ಏಲೇ ಮಾಡಲಾಗುತ್ತಿದೆ.

ಶ್ರೀ ಪಿ ಎಂ. ಚಿಕ್ಕಬೋರಯ್ಯ.—ಈ ಪಡುವಾರಹಳ್ಳಿ ಬಡಾವಣೆಯಲ್ಲಿ ಒಂದು ಸಿನಿಮಾ ಥಿಯೇಟರ್‌ಗೆ ನಿವೇಶನ ಕೊಟ್ಟಿದ್ದಾರೆಯೇ? ಎರಡನೆಯದಾಗಿ ಈಗ ನಿವೇಶನಗಳನ್ನು ಲಾಟರಿ ಎತ್ತುವ ಮೂಲಕ ಕೊಡುವುದನ್ನು ಕೈಬಿಟ್ಟು ಜಮೀನು ಕಳೆದುಕೊಂಡವರಿಗೆ ನಿವೇಶನ ಕೊಡುವುದು ಮತ್ತು ಅಕ್ಕಪಕ್ಕದ ಗ್ರಾಮಗಳಲ್ಲಿನ ವಸತಿ ಹೀನರಿಗೆ ನಿವೇಶನಗಳನ್ನು ಕೊಡುವುದು ಸೂಕ್ತ ವ್ಯವಸ್ಥೆ ಯಾಗುವುದಿಲ್ಲವೆ?

ಶ್ರೀ ಎ. ಲಕ್ಷ್ಮೀಸಾಗರ್.—ಇದು ಅವರ ಅಭಿಪ್ರಾಯ ಸ್ವಾಮಿ ಶೇಕಡ ೯೦ರಷ್ಟು ನಿವೇಶನಗಳನ್ನು ಲಾಟರಿ ಎತ್ತುವ ಮೂಲಕ ಕೊಡುವುದರಿಂದ ಯಾವುದೇ ಕೈಚಳಕವಾಗಲೀ, ಯಾರದೇ ಫಿಯರ್ ಅಥವಾ ಫೇವರ್‌ಗಳು ನಡೆಯುತ್ತಿಲ್ಲ. ಇನ್ನು ವಸತಿ ಮತ್ತು ನಿವೇಶನ ಹೀನರಿಗೆ ಹಾಗೂ ಜಮೀನು ಕಳೆದುಕೊಂಡವರಿಗೆ ನಿವೇಶನ ಕೊಡುವ ಪ್ರಶ್ನೆ ಸದರಿ ಮಂಡಲಿಗೆ ಹಾಲಿ ಶೇಕಡ ೧೦ರಷ್ಟು ನಿವೇಶನ ಗಳನ್ನು ಡಿಸ್ಕ್ರಿಷನರಿ ಪವರ್ ಬಳಸಿ ಕೊಡಲು ಅವಕಾಶ ಇದೆ. ಏನೇ ಆಗಲಿ ಈ ಸಲಹೆಯನ್ನು ಪರಿಶೀಲಿಸುತ್ತೇನೆ. ಯಾರಿಗಾದರೂ ತೊಂದರೆಯಾಗಿದ್ದರೆ ನನ್ನ ಗಮನಕ್ಕೆ ಬಂದಲ್ಲಿ ಅದನ್ನು ನೋಡುತ್ತೇನೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಲಾಟರಿ ಪದ್ಧತಿಯನ್ನು ಅನುಸರಿಸುತ್ತಿರುವುದರಿಂದ ಒಂದೇ ಕುಟುಂಬಕ್ಕೆ ಸೇರಿದ ೩ ಜನರಿಗೆ ಸಿಗುವ ಚಾನ್ಸ್‌ನ್ ಬಹಳ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲಿ ಎಲಿಜಿಬಿಲಿಟಿ ಎನ್ನುವುದು ಇರುತ್ತದೆ. The allotment will be made only to eligible candidates. ಅಂಥಾದ್ದೇನಾದರೂ ಇದ್ದರೆ ಒಂದು ವಾರದ ಮುಂಚೆ ಲಾಟರಿ ಹಾಕುವ ಪಟ್ಟಿಯಲ್ಲಿ ಯಾರುಯಾರು ಎಲಿಜಿಬಲ್ ಇರುತ್ತಾರೆಂದು ಪಟ್ಟಿ ಪ್ರಕಟವಾಗುತ್ತದೆ. ಆಗ ಇಂಥ ಏರುಪೇರುಗಳನ್ನು ನಮ್ಮ ಗಮನಕ್ಕೆ ತಂದರೆ ಅದನ್ನು ಸರಿಪಡಿಸುತ್ತೇನೆ.

ಚಕ್ರವರ್ತಿ ಲೇಔಟ್‌ನಲ್ಲಿ ಶ್ರೀ ದತ್ತಗುರು ಸದಾನಂದ ಸ್ಪಿರಿಚ್ಯುಯಲ್ ಮತ್ತು ಮೆಡಿಟೇಷನ್ ಸೆಂಟರ್‌ರವರಿಗೆ ನಿವೇಶನ ಹಂಚುವ ಬಗ್ಗೆ.

೧೫೫೨. ಶ್ರೀ ಪಿ. ಕಣ್ಣನ್ (ಶಾಂತಿ ನಗರ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರ ಹಾಗೂ ಆಹಾರ, ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ೨೦ ಚಕ್ರವರ್ತಿ ಲೇ ಔಟ್‌ನಲ್ಲಿರುವ ಶ್ರೀ ದತ್ತಗುರು ಸದಾನಂದ ಸ್ಪಿರಿಚ್ಯು-ಯಲ್ ಮತ್ತು ಮೆಡಿಟೇಷನ್ ಸೆಂಟರ್ ರವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ದಿನಾಂಕ ೧೧-೧೦-೧೯೮೪ರಂದು ಮೆಡಿಟೇಷನ್ ಸೆಂಟರ್ ಕಟ್ಟಡವನ್ನು ಕಟ್ಟಲು ಅನುಮೋದಿತವಾಗಿರುವ ಕಟ್ಟಡದ ನಕ್ಷೆಯನ್ನು ಕರ್ನಾಟಕ ಹೈಕೋರ್ಟ್ ರಿಟ್ ಅಪೀಲ್ ಸಂಖ್ಯೆ : ೧೯೬೬ ೨೦೮೬ರಲ್ಲಿ ರದ್ದು ಪಡಿಸಿರುವುದು ನಿಜವೇ ?

ಆ) ೧೧-೧೦-೧೯೮೮ಳಿಗೆ ಒಳಗೆ ಅಥವಾ ನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸದರಿ ಲೇಔಟ್‌ನಲ್ಲಿ ಕಟ್ಟಡದ ನಕ್ಷೆಗೆ ಅನುಮತಿ ನೀಡಿರುತ್ತದೆಯೇ ?

ಇ) ಹಾಗಿದ್ದಲ್ಲಿ ೧೧-೧೦-೧೯೮೮ಳಿಗೆ ಹಿಂದೆ ಮತ್ತು ನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಂಜೂರು ಮಾಡಿದ ನಕ್ಷೆಯ ಪ್ರಕಾರ ಈ ಬಡಾವಣೆಯಲ್ಲಿ ಕಟ್ಟಿರುವ ಕಟ್ಟಡಗಳ ಸ್ಥಿತಿ ಏನು ?

ಶ್ರೀ. ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರ ಹಾಗೂ ಆಹಾರ ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಹೌದು. ೧೧-೧೦-೧೯೮೮ಳಿಗೆ ನಂತರ ಮತ್ತು ಅದಕ್ಕೆ ಮುಂಚಿತವಾಗಿಯೂ ಲೇಔಟ್‌ನಲ್ಲಿ ಕಟ್ಟಡದ ನಕ್ಷೆಗೆ ಅನುಮತಿ ನೀಡಲಾಗಿದೆ.

ಇ) ಈ ಬಡಾವಣೆಯಲ್ಲಿ ಬೇರೆ ಮನೆಗಳಿಗೆ ಲೈಸೆನ್ಸ್‌ನ್ನು ಮುಂಜೂರಾತಿ ಮಾಡಿರುವುದರ ಬಗ್ಗೆ ಯಾವ ರೀತಿಯ ಉಲ್ಲೇಖವು ಉಚ್ಚ ನ್ಯಾಯಾಲಯದ ಆಜ್ಞೆಯಲ್ಲಿರುವುದಿಲ್ಲ ಆದರೆ ಉಚ್ಚ ನ್ಯಾಯಾಲಯದ ಆಜ್ಞೆಯಂ ಶ್ರೀ ದತ್ತಗುರು ಸದಾನಂದ ಸ್ಪಿರಿಚ್ಯುಯಲ್ ಮತ್ತು ಮೆಡಿಟೇಷನ್ ಸೆಂಟರ್ ರವರ ಕಡೆಗೆ ಆಗಿರುತ್ತದೆ. ಆದರೂ ಉಚ್ಚ ನ್ಯಾಯಾಲಯದ ಆಜ್ಞೆಗೆ ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆಯಿರುತ್ತದೆ.

ಶ್ರೀ ಸಿ. ಕಣ್ಣನ್.—ಹೈಕೋರ್ಟ್ ಆರ್ಡರ್ ಮೇಲೆ ಸುಪ್ರೀಮಂ ಕೋರ್ಟಿಗೆ ಅಪೀಲ್ ಮಾಡಿರುವವರು ಯಾರು ? ಬಿಡಿಎ ನವರೋ ಅಥವಾ ಇನ್ನಾರು ?

SRI A. LAKSHMISAGAR.—The aggrieved party has gone to the Supreme Court.

ಅಧ್ಯಕ್ಷರು.—ಶ್ರೀ ಎಂ. ಶಿವಣ್ಣನವರ ಪ್ರಶ್ನೆ ಮುಂದಕ್ಕೆ ಹೋಗಿದೆ.

ರಾಜ್ಯದಲ್ಲಿರುವ ಜೀತದಾಳುಗಳು

೯೭೧. ಶ್ರೀ ಹೆಚ್. ಕೆ. ಕುಮಾರಸ್ವಾಮಿ (ಬೇಲೂರು).—ಪಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವರ್ಕ್ಸ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಈವರೆಗೆ ಜೀತವಿಮುಕ್ತಿ ಹೊಂದಿದವರ ಸಂಖ್ಯೆ ಎಷ್ಟು ?

ಆ) ಇವರಿಗಾಗಿ ಇಲ್ಲಿಯವರೆಗೆ ಆಗಿರುವ ವೆಚ್ಚವೆಷ್ಟು ?

ಇ) ರಾಜ್ಯದಲ್ಲಿ ಜೀತದಾಳುಗಳು ಇನ್ನು ಸಾವಿರಾರು ಮಂದಿ ಇದ್ದು ಅವರು ಪಟ್ಟಿಗೆ ಸೇರದಿರುವ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಅವರಿಗೆ ಕಾಲಾವಕಾಶ ಕೊಟ್ಟು ಅರ್ಜಿಗಳನ್ನು ಸ್ವೀಕರಿಸಲಾಗುವುದೆ ?

ಈ) ಜೀತವಿಮುಕ್ತರಿಗೆ ಕೊಟ್ಟಿರುವ ಈಗಿನ ರೀತಿಯ ಸಹಾಯವನ್ನು ಶಾಶ್ವತ ಪರಿಹಾರ ರೂಪದಲ್ಲಿ ಕೊಡುವ ಯೋಜನೆ ಸರ್ಕಾರದಲ್ಲಿದೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವರ್ಕ್ಸ್ ಮಂತ್ರಿಗಳು).—

ಅ) ೩೫,೬೭೧

ಆ) ರೂ. ೧೪೫.೮೦ ಲಕ್ಷಗಳು.

ಇ) ಕಾನೂನು ರೀತ್ಯ ಈ ಲಾಭ ಪಡೆಯಬಹುದಾಗಿದೆ. ಇದಕ್ಕೆ ಕಾಲಮಿತಿ ಏನೂ ಇಲ್ಲ.